


ತಯಾರಿಯಲ್ಲೂ ಶೇಷಪ್ಪ ಪಳಗಿದ ಹುಲಿ. ಭಟ್ಟರಂತೂ ಸದಾಕಾಲ ಭಂಗಿ ಅಮಲಿನಲ್ಲೇ ತೇಲಾಡುತ್ತಾ, ನಾರಾಯಣ ಸ್ಮರಣೆ ಮಾಡುತ್ತಿದ್ದರೆಂಬುದು ನಿಜ. ಭಟ್ಟರ ಮಾತೆಂದರೆ, ಶೇಷಪ್ಪನವಿಗೆ ವೇದವಾಕ್ಯ! ದೇವಸ್ಥಾನದ ಪುನರ್ ಪ್ರತಿಷ್ಠಾಪನಾ ಸಂದರ್ಭದಲ್ಲಿ, ಕುಟುಂಬದ ಗೋತ್ರಸೂತಕ ಹರಿದುಕೊಳ್ಳುವ ಸಲಹೆ ನೀಡಿದ ವರೂ ಭಟ್ಟರೇ! ಎಷ್ಟೆಂದರೂ ಶಂಖದಿಂದ ಬಂದದ್ದು ತೀರ್ಥ ತಾನೇ? ಶೇಷಪ್ಪ ತನ್ನಪಾಡಿಗೆ ತಾನಿರುವ ಹವ್ಯಾಸದವನಲ್ಲ! ದಾರೀಲಿ ಹೋಗುವ ಮಾರಿಯನ್ನು ಮನೆಗೆ ಕರೆದುತರುವ ಜಾಯಮಾನದವ. ಇಲ್ಲದಿದ್ದರೆ ಟೆನೆನ್ಸಿ ಕಾಯದೆ ಜಾರಿ ವೇಳೆ, ಕುಟುಂಬದವರ ಗೇಣಿ ಜಮೀನು ಬೇರೆ ಯವರೊಬ್ಬರಿಗೆ ದಕ್ಕುವಂತೆ ಮಾಡಿದ ಉಪದ್ವ್ಯಾಪ ಸಾಮಾನ್ಯವೇ? ಕುಟುಂಬದ ಸಂಬಂಧ ಹರಿದುಕೊಂಡ ಸಮಯದಲ್ಲೇ ನಡೆದ ಈ ಹಗರಣವೂ, ಇನ್ನಷ್ಟು ಕುಲಗೆಡೆಸಿತು! ಮಾತಿನ ನಡುವೆ ಶೇಷಪ್ಪನ ಪ್ರಸ್ತಾಪ ಬಂದರೆ ಸಾಕು, ನೋವು ಉಂಡವರು, 'ಆ ಕುಲಘಾತಕ ಶನಿ ಹೆಸರೆತ್ತಬೇಡ.. ಮಾಡಿದ ಪಾಪಕರ್ಮ, ಅವನೇ ಉಂಡು ಸಾಯ್ತಾನೋ. ಇಲ್ಲೋ..ನೋಡಿ...' ಎಂದು ಉರಿದುಬಿದ್ದು, ಹಾಕುತ್ತಿದ್ದ ಹಿಡಿ ಶಾಪ. ವೃದ್ಧಾಪ್ಯ ಸಹಜವಾಗಿ ಬೆನ್ನುಬಾಗಿ ಕೈಕಾಲು ನಡುಗುತ್ತ ಓಡಾಡುತ್ತಿದ್ದ ಶೇಷಪ್ಪ, ಕ್ಯಾನ್ಸರ್ ಒಂದು ನೆಪವಾಗಿ ನರಳಿ ಸತ್ತದ್ದಂತೂ ನಿಜ!

***

'ಅಪ್ಪ ಮಾಡಿದ ತೋಟ ಮಾರಿ, ಆ ತೋಟಕ್ಕೆ ಮಗನೇ ಮಣ್ಣು ಹೊರುವುದೆಂದರೆ..'

'ಶ್ರಮ ಪಟ್ಟು ಮಾಡಿದ ಜಮೀನು ನಮ್ಮ ಕೈತಪ್ಪಿದ ಫಲ ಇದು..'

'ಅಪ್ಪ ಕುಲಘಾತಕನಾದರೆ, ಮಗ ಜಾತಿ ಕಂಟಕ'

'ಮಾಡಿದ್ದುಣ್ಣೋ ಮಾರಾಯ ಅಂತ ಗಾದೆ ಉಂಟಲ್ವಾ..'

ತಂದೆ ಶೇಷಪ್ಪ, ಮಗ ಅಮರೇಂದ್ರ ಕುರಿತು ಊರ ಕೆಲವರ ಉದ್ಗಾರ... ಒಂದು ಸಂಜೆ ಇಳಿಬಿಸಿಲ ಹೊತ್ತಲ್ಲಿ ಅಮರೇಂದ್ರನನ್ನು ಭೇಟಿಯಾಗಲು ಸಸಿಹಕ್ಲಿಗೆ ಹೋದರೆ, ನೋಡುವುದೇನು...!?

ಶೇಷಪ್ಪನ ಕಾಲದ ವೈಭವದ ಚೌಕಿಮನೆ ಹೆಚ್ಚಿನ ಭಾಗ ಜರಿದು ಹಾಳು ಸುರಿಯುತಿತ್ತು.. ಉಪ್ಪರಿಗೆ ಮೆಟ್ಟಲು ಹತ್ತುವ ಮುಚ್ಚಿಗೆ ಅಡಿ ಗೋಡೆ ಮೂಲೆಯಲ್ಲಿ, ಅಮರೇಂದ್ರ ಮೊಕ್ಕಾಂ! ಸುತ್ತಮುತ್ತ ಕಣ್ಣು ಹಾಯಿಸಿದರೆ ಮಳೆ ಸುರಿದು ಪಾಚಿಕಟ್ಟಿದ